we say that there must be at least 20 members to give permission. Does he think that a rule which we framed after so much deliberation is any less important than an adjournment motion? Rules have been framed after a great deal of deliberation, after a great deal of discussion and they should not be discussed at all by way of amendment unless at least 20 members rise to give permission.

Sri L. SIDDAPPA.—Even for an adjournment motion there is provision only for ten members. *Vide* Rule 43.

The Hon'ble Sri K. T. BHASHYAM:—But in this matter, so far as the amendment of the Rules is concerned, we are very strongly of opinion that unless 20 members at least rise to give permission, permission ought not to be granted to discuss any amendment.

Sri L. SIDDAPPA.—Then I seek the permission of the House to withdraw my amendment.

The amendment was, by leave of the House, withdrawn.

Mr. SPEAKER.—Rules 183 to 185, both inclusive. The question is:

"That Rules 183 to 185, both inclusive, stand part of the Rules of Procedure."

The motion was adopted.

Rules 183 to 185, both inclusive, were added to the Rules of Procedure.

Mr. SPEAKER.—Schedules I and II. The question is:

"That Schedules I and II stand part of the Rules of Procedure."

The motion was adopted.

Schedules I and II were added to the Rules of Procedure.

Mr. SPEAKER.—Rule 1.

Sri T. MADIAH GOWDA (Bangalore District—General).—Regarding Rule I, I am afraid one other clause is omitted to be put in, that is, as to when these Rules will come into force.

The Hon'ble Sri K. T. BHASHYAM.—I will make a motion about it later when moving for the adoption of the Rules.

Mr. SPEAKER.—The question is:

"That Rule 1 stand part of the Rules of Procedure."

The motion was adopted.

Rule 1 was added to the Rules of Procedure.

The Hon'ble Sri K. T. BHASHYAM:—Sir, I beg to move:

"That the Draft Rules of Procedure, as amended, be adopted and shall come into force from the date of their publication in the *Mysore Gazette.*"

In making this motion, I beg to thank you, particularly the Hon'ble Speaker, for the great interest you took and the advice and guidance you gave to the Committee during all its stages, and the Members of the Committee for their co-operation. We have done, I consider, a good bit of business. I was indeed delighted when the Hon'ble Member Sri Siddappa complimented us on our efforts and much of the credit is due to you Sir, and I convey the thanks of the House to you. I move that the Rules of Procedure as amended may be adopted and that they may come into force from the date of their publication in the *Mysore Gazette.*

Mr. SPEAKER.—The question is:

"That the Draft Rules of Procedure, as amended, be adopted and shall come into force from the date of their publication in the *Mysore Gazette.*"

The motion was adopted.

Mr. SPEAKER.—The House will now adjorn for Lunch for half an hour.

The Assembly adjourned for Lunch at Forty-Five Minutes past Three of the Clock and re-assembled at Eighteen Minutes past Four of the Clock, Mr. Speaker (The Hon'ble Sri V. Venkatappa) in the Chair.

The Mysore Legislative Assembly (Prevention of Disqualification) Bill, 1951.

Mr. SPEAKER (The Hon'ble Sri V. Venkatappa).—The Hon'ble Law Minister will move for the consideration of the Mysore Legislative Assembly (Prevention of Disqualification) Bill, 1951.

The Hon'ble Sri K. T. BHASHYAM (Minister for Law and Labour).—Sir, I beg to move :

"That the Mysore Legislative Assembly (Prevention of Disqualification) Bill, 1951, as reported by the Select Committee be taken into consideration."

In making this motion, I wish to bring to the attention of the Hon'ble Members that there is not much change made in the body of the Bill. We have made one change, namely, that instead of calling it 'the Prevention of Disqualification concerning the Legislative Assembly' we have said, it should be the Mysore Legislature. Because we propose that this should apply to both Houses of Legislature if and when they come into being. So, instead of the words 'Mysore Legislative Assembly' we use the words 'Mysore Legislature'.

Then, the second change which deserves attention is this. Clause 3 of the original Bill ran as follows :—

"The State Government may, by Notification in the *Mysore Gazette*, add to, or cancel any entry in the schedule to this Act, and the reference made in section 2 to the Schedule shall be construed as referring to such Schedule as for the time being amended in exercise of the powers conferred by this section."

We felt that it might be considered a sort of delegated legislation and therefore that clause should be deleted.

Then in the schedule you will find six items. We felt that the first and the sixth may remain and that the items in between, 2 to 5 being covered by number six may be deleted. Because you will find that they refer to the Chairman of the Beggar Relief Committee, Chairman of the Central Board of Indian Medicine, Chairman of any Government Industrial concern and Director of any Government Industrial concern, all of which are included in item (6) as amended by us. We propose to convert item 6 to item 2. This is not a very material change and therefore publication was considered unnecessary. I move that this Bill as modified by the Select Committee be taken into consideration by this House.

Mr. SPEAKER.—Motion moved :

"That the Mysore Legislative Assembly (Prevention of Disqualification) Bill, 1951, as reported by the Select Committee, be taken into consideration"

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ಈಗ ಪಾರ್ಲಿಮೆಂಟಿನ ಮುಂದೆ Peoples' Representation Bill No. 2 ಎಂಬ ಮಸೂದೆ ಚರ್ಚೆಯಲ್ಲಿದೆ. ಅಲ್ಲಿ ಸದಸ್ಯರ ಅನರ್ಹತೆಯ ಬಗ್ಗೆ ಒಂದು ವಿಧವಾಗಿ ಚರ್ಚೆಯಾಗುತ್ತಾ ಇರುವ ಹಾಗಿದೆ. ಸರ್ಕಾರಿ ಆಡಳಿತಕ್ಕೊಳಪಟ್ಟ ಕೈಗಾರಿಕಾ ಸಂಸ್ಥೆಗಳಲ್ಲಿ ಡೈರೆಕ್ಟರ್, ಚೇರ್ಮನ್, ಅಥವ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರೂ ಅಂಥವರು ಸದಸ್ಯರಾಗಲು ಅರ್ಹರಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

They will be disqualified from standing as candidate for the Parliament or the State Legislature.

ಈ ರೀತಿ ಚರ್ಚೆಯಾಗುತ್ತಿದೆ. ಆದುದರಿಂದ ಆಖೈರಾಗಿ ಅಲ್ಲಿ ಏನು ತೀರ್ಮಾನವಾಗುತ್ತದೆಂಬುದನ್ನು ನೋಡಿಕೊಂಡು ಆಮೇಲೆ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳುವುದು ನ್ಯಾಯವೆಂದು ಕಾಣುತ್ತದೆ. ಸಭೆಯ ಮುಂದಿಟ್ಟಿರುವ ಈ ಮಸೂದೆಯ ಪ್ರಕಾರ

"Chairman, Director or Member of any Committee or Board appointed by Government."

ಎಂದಿದೆ. ಅದೇನಾದರೂ ಕಾನೂನಾದರೆ ಇದು ಹೊರಟುಹೋಗುತ್ತದೆ. ಆದುದರಿಂದ ಈಗ ಈ ಕಾನೂನುಮಾಡಿ ಅವಕಾಶಮಾಡಿದರೂ ಪ್ರಯೋಜನಕ್ಕೆ ಬಹುವುದಿಲ್ಲ. ಆದುದರಿಂದ ಪಾರ್ಲಿಮೆಂಟಿನ ಮುಂದಿರುವ ಮಸೂದೆ ಕಾನೂನಾಗುವವರೆಗೂ ಕಾದುನೋಡಿಕೊಂಡು ಆಮೇಲೆ ಇದನ್ನು ತೆಗೆದುಕೊಳ್ಳುವುದು ಸೂಕ್ತವೆಂದು ನನ್ನ ಅಭಿಪ್ರಾಯ.

*ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಶ್ರೀಮಾನ್ ಸಿದ್ದಪ್ಪನವರು ಹೇಳಿದ ಅಭಿಪ್ರಾಯ ಅಷ್ಟು ಸೂಕ್ತವಲ್ಲ. ಪಾರ್ಲಿಮೆಂಟಿನ ಮುಂದಿರುವ ಮಸೂದೆ ಅಂಗೀಕೃತವಾಗಿ ಕಾನೂನಾಗಿ ಇಂಡಿಯಾ ದೇಶಕ್ಕೆಲ್ಲ ಅನ್ವಯಿಸಿದರೆ, ಇದು ತಾನಾಗಿಯೇ ಹೊರಟು ಹೋಗುತ್ತದೆ. ಅಲ್ಲಿ disqualification ಏನೇನಿರಬೇಕೆಂಬುದನ್ನು ಅವರು ಚರ್ಚೆಮಾಡಿ ತೀರ್ಮಾನಮಾಡುತ್ತಿದ್ದಾರೆ. ಅದರೆ ಈ ಮಸೂದೆ Prevention of disqualificationಗೆ ಸಂಬಂಧಪಟ್ಟದ್ದು. ಅನರ್ಹತೆಗಳನ್ನು ತಡೆಯುವುದಕ್ಕಾಗಿ ಇದನ್ನು ತಂದಿರುವುದು. ಅಲ್ಲಿ ಈಗ ಪರಿಶೀಲನೆಯಲ್ಲಿರುವ ಮಸೂದೆ ತೀರ್ಮಾನವಾಗುವುದಕ್ಕೆ ಮೊದಲು ಸರ್ಕಾರದವರು ಇಲ್ಲಿ ಯಾವುದಾದರೂ ಸಮಿತಿ,ಕಂಪೆನಿ ಮುಂತಾದ ಸಂಸ್ಥೆಗಳಿಗೆ ಯಾರನ್ನಾದರೂ ಚೇರ್ಮನ್ನರನ್ನಾಗಿ ನೇಮಿಸಿದರೆ, ಅಂಥವರು ಆ ಸಂಸ್ಥೆಗಳಲ್ಲಿ financial interestಗೆ Office of profitಗೆ ನೇಮಿತರಾಗಿರುತ್ತಾರೆ. ಆದುದರಿಂದ ಅವರು ಈ ಸಭೆಗೆ ಸದಸ್ಯರಾಗಲು ಅನರ್ಹರೆಂದು ಹೇಳುವುದಕ್ಕೆ ಅವಕಾಶವಿಲ್ಲದೇಯಿರಲೆಂದು ಈ ಮಸೂದೆಯನ್ನು ತಂದಿರುವುದು, ಅಲ್ಲಿ ತೀರ್ಮಾನವಾಗಲು ಎಷ್ಟು ದಿವಸವಾಗುತ್ತದೋ ಏನೋ ಗೊತ್ತಿಲ್ಲ. ಈ ಮಸೂದೆಯಲ್ಲಿ ಸಾರ್ವಜನಿಕ ಹಿತಕ್ಕೆ ಧಕ್ಕೆ ಬರುವುದೇನೂ ಇಲ್ಲ. ಇದು ಹೋದ ಅಧಿವೇಶನದಿಂದಲೂ pending ಆಗಿದೆ. ಇದನ್ನು ಈಗ ತೀರ್ಮಾನಮಾಡಿ ಮುಂದೆ ಅಗತ್ಯ ಬಂದರೆ, ಅವರು ಕಾನೂನು ಮಾಡಿದರೆ ಆ ಕಾನೂನನ್ನು ಇದೇನೂ override ಮಾಡುವುದಿಲ್ಲ. ಅದನ್ನು override ಮಾಡುವ ಅಧಿಕಾರವೇನೂ ಇದರಲ್ಲಿಲ್ಲ.

ಆದುದರಿಂದ ಇದನ್ನು ಮನಸ್ಸಿನಲ್ಲಿಟ್ಟುಕೊಂಡರೆ ವಿರೋಧಿಸುವುದಕ್ಕೆ ಕಾರಣವೇನೂ ಇಲ್ಲವೆಂದು ಶ್ರೀಮಾನ್ ಸಿದ್ದಪ್ಪನವರಿಗೆ ನಾನು ಹೇಳುತ್ತೇನೆ.

The Hon'ble Sri K. T. BHASHYAM.—I beg to add to what the Hon'ble Member Sri A. Bheemappa Naik has said. We are stating here that the following offices shall not disqualify a person from being a member of this House although they may be treated as offices of profit. The Hon'bie Member will see that article 191 of the Constitution of India states

"(1) A person shall be disqualified for being chosen as and for being a member of the Legislative Assembly or Legislative Council of a State—

(*a*) if he holds any office of profit under the Government or of any State specified in the First Schedule, other than an office declared by the Legislature of the State by law not to disqualify its holder;

(*b*) if he is of unsound mind and stands so declared by a comptent Court;....."

They are adding to these clauses. Now there are about five clauses here. If any person is in direct contractual relation with the Government, which brings him any remuneration or if he has got any permit or license and so on and so forth, such persons have got to be disqualified. The first clause is the only clause with which we are dealing here. We are not dealing with the other clauses. Granting for a moment that the law they make at the Centre happens to be in conflict with ours, the former will prevail. But we need not wait till then. We want the pick of the country to be in the Assembly and also help us in the various branches of Government's activities. It is in order to get the help of the Hon'ble Members who may be most competent to help us in certain committees that we want to put them here and say that they shall not be disqualified simply because they happen to be members or chairmen of those Committees. I do not see any difficulty in the Hon'ble Members accepting this Bill as amended.

Mr. SPEAKER.—The question is:

"That the Mysore Legislative Assembly (Prevention of Disqualification) Bill, 1951, as reported by the Select Committee, be taken into consideration."

The motion was adopted.

Mr. SPEAKER.—The clauses of the Bill will now be submitted to the House. Clause 2. The question is:

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Schedule.

There is an amendment by Sri G. Veerappa. He has requested the Chair to allow Sri C. R. Basappa to move it.

The Hon'ble Member Sri C. R. Basappa is not present.

There is another amendment. It is by Sri L. Siddappa.

Sri L. SIDDAPPA.—My amendment reads like this:—

"That in the Schedule a new item shall be added at the end as follows:—

'3. Village Officers, *i.e.*, Patels and Shanbhogs'."

ಸ್ವಾಮಿ, ನಮ್ಮ ಸಂಸ್ಥಾನದಲ್ಲಿ ಅನೂಚಾನವಾಗಿ ಬಂದ ಒಂದು ಪದ್ಧತಿಯೇನೆಂದರೆ ಪಟೇಲ್ ಶ್ಯಾನುಭೋಗರುಗಳು ಸರ್ಕಾರಿ ಸಂಬಳ ತೆಗೆದುಕೊಂಡು ಕೆಲಸ ಮಾಡುತ್ತಿದ್ದರೂ ಅವರು for all practical purposes ಇತರ ಖಾಸಗಿ ಮನುಷ್ಯರಂತೆಯೇ ಅಸೆಂಬ್ಲಿ ಮತ್ತು ಕೌನ್ಸಿಲ್‌ಗಳಿಗೆ ಚುನಾವಣೆಗೆ ನಿಂತು ಸದಸ್ಯರಾಗಿ ಬರುವುದಕ್ಕೆ ಅವಕಾಶವಿದೆ. ಬೇರೆಯವರಿಗೆ ಇರುವಂತೆ ಇದುವರೆಗೂ ಅವರಿಗೇನೂ ಅನರ್ಹತೆ ಇಲ್ಲ. ಅಲ್ಲದೆ ಇತರೇ ಸ್ಥಳೀಯ ಸಂಸ್ಥೆಗಳಿಂದ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಾಗಲೀ ಗ್ರಾಮಪಂಚಾಯ್ತಿಗಳಲ್ಲಾಗಲೀ ಇದ್ದುಕೊಂಡು ಕೆಲಸ ಮಾಡುವುದಕ್ಕೆ ಅಭ್ಯಂತರವಿಲ್ಲ. ಏಕೆಂದರೆ ಸರ್ಕಾರದವರು ಅವರಿಗೆ ಕೊಡುತ್ತಿರುವ ಸಂಭಾವನೆಯೇನೂ ಹೆಚ್ಚಿನದಲ್ಲ, ಅವರು ಹೆಚ್ಚಿಗೆ ಸಂಭಾವನೆ ಕೊಡಬೇಕೆಂದು ಕೇಳಿದಾಗಲೆಲ್ಲಾ ಸರ್ಕಾರದವರು ಪದೇ ಪದೇ ಏನು ಹೇಳುತ್ತಿದ್ದಾರೆಂಬುದು ಎಲ್ಲರಿಗೂ ತಿಳಿದೇ ಇದೆ. ಎಷ್ಟೋ ಸಾರಿ ಹಿಂದಿನ ಪ್ರಜಾಪ್ರತಿನಿಧಿ ಸಭೆಯ ಮುಂದೆಯೂ, ನ್ಯಾಯವಿದಾಯಕ ಸಭೆಯ ಮುಂದೆಯೂ ಈ ವಿಷಯ ಬಂದು ಪಟೇಲ್ ಶ್ಯಾನುಭೋಗರ ಸಂಬಳ ಹೆಚ್ಚುಮಾಡಬೇಕು, ತುಟ್ಟಿಭತ್ಯ ಕೊಡಬೇಕೆಂದು ಅರಿಕೆಗಳು ಬಂದಾಗ ಸರ್ಕಾರದವರು ಅವರಿಗೆ ಏನು ಸಮಾಧಾನ ಕೊಡುತ್ತಿದ್ದರೆಂದರೆ 'ನೀವು ಸರ್ಕಾರಿ ನೌಕರರೆಂದು ತಿಳಿದುಕೊಳ್ಳಕೂಡದು. ನಿಮಗೆ ಹೆಚ್ಚಿನ ಗೌರವವನ್ನು ಕೊಟ್ಟು ಬಾಕಿ ಖಾಸಗಿ ಮನುಷ್ಯರಿಗಿರತಕ್ಕ ಹಕ್ಕು ಬಾಧ್ಯತೆಗಳನ್ನೆಲ್ಲಾ ಕೊಡುತ್ತಿದ್ದೇವೆ" ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಈಗ ನಾವು ಹೇಳುವುದಾದರೂ ಕೂಡ, ನಮ್ಮ ಸಂಸ್ಥಾನದಲ್ಲಿರುವ 17 ಸಾವಿರ ಚಿಲ್ಲರೆ ಗ್ರಾಮಗಳಿಂದ 17 ಸಾವಿರ ಪಟೇಲರುಗಳೂ, ಮತ್ತು ಸುಮಾರು ಅದರ ಅರ್ಧದಷ್ಟು ಶ್ಯಾನುಭೋಗರುಗಳೂ ಇರುವವರನ್ನು ಈ ಸಭೆಗೆ ಮೊದಲನಂತೆಯೇ ಬರುವುದಕ್ಕೆ ಅವಕಾಶವಿರುವಂತೆ ಮಾಡಬೇಕು ಎಂದು. ಇಲ್ಲದಿದ್ದರೆ ಹಳ್ಳಿಗಳ ಕಡೆ

(SBI L. SIDDAPPA.)

ಯಿದ್ದು ಸರ್ಕಾರಿ ಕಾನೂನು ಕಟ್ಟಳೆಗಳ ವಿಷಯದಲ್ಲಿ ತಕ್ಕಮಟ್ಟಿಗೆ ಪರಿಶ್ರಮಹೊಂದಿದಂಥ ಇಂಥಾ ಸಾಪಿರಾರು ಜನಗಳ ಅನುಭವ ಈ ಸಭೆಗೆ ಇಲ್ಲದೆ ಹೋಗುತ್ತದೆ. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಈ ಸಭೆಯವರು ಒಪ್ಪಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

Mr. SPEAKER.–Amendment moved.–

"That in the Schedule a new item shall be added at the end as follows:—

'3. Village Officers, *i.e.*, Patels and Shanbhogs'."

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯಜಿಲ್ಲೆ)—ಶ್ರೀಮಾನ್ ಸಿದ್ದಪ್ಪನವರು ತಂದಿರುವ ಈ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಈಗ ಸದಸ್ಯರಿಗೆ ಇಂಥ ಕೆಲವು ಅನರ್ಹತೆಗಳು ಇರಕೂಡದೆಂದು ವಿಧಿಸಿರುವುದರ ಉದ್ದೇಶವೇನೆಂದರೆ, ಸರ್ಕಾರದಿಂದ ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಏನಾದರೂ ದುಡ್ಡುಕಾಸಿನ ಪ್ರಯೋಜನ ಹೊಂದಿಕೊಂಡು ಅಂಥವರು ಶಾಸನ ಸಭಾಸದಸ್ಯರಾಗಿ ಕೆಲಸಮಾಡುವುದಾದರೆ, ಅಂಥವರಿಗೆ ಸಾಮಾನ್ಯವಾಗಿ ಸರ್ಕಾರದ ವರ ನೀತಿ ರೀತಿಯನ್ನು ವಿರೋಧಿಸಬಾರದೆಂಬ ಮನೋಭಾವನೆ ಉಂಟಾಗಬಹುದೆಂಬ ಶಂಕೆಗೆ ಅವಕಾಶವಿದೆ. ನಿಷ್ಪಕ್ಷಪಾತವಾಗಿ ಶಾಸನ ಸಭಾ ಸದಸ್ಯರಾಗಿ ಅಂಥವರು ಕೆಲಸಮಾಡಲಾರರು ಎಂಬ ಭಾವನೆಯಿಂದ ಚುನಾವಣೆಗೆ ನಿಲ್ಲುವುದಕ್ಕೆ ಅರ್ಹರಾಗಿರಕೂಡದೆಂದು ಕೇಂದ್ರ ಶಾಸನ ಸಭೆಯಲ್ಲಿ ಪರ್ಯಾಲೋಚಿಸುತ್ತಿದ್ದಾರೆ; ಇಲ್ಲೂ ಹಾಗೆಯೇ ಇದೆ. ಆ ದೃಷ್ಟಿಯಿಂದ ನೋಡುವುದಾದರೆ, ಈ ಪಟೇಲ್ ಶ್ಯಾನುಭೋಗರುಗಳೇನೂ ಸರ್ಕಾರದಿಂದ ಸಂಬಳ ಸಾರಿಗೆಗಳನ್ನು ತೆಗೆದುಕೊಳ್ಳುತ್ತಿಲ್ಲವಾದರೂ ಮತ್ತು ಖಾಸಗೀ ಮನುಷ್ಯರ ಹಕ್ಕುಭಾದ್ಯತೆಗಳೆಲ್ಲಾ ಇವರಿಗೂ ಇವೆಯೆಂದು ಹೇಳುತ್ತಿರುವುದಾದರೂ.....

ಶ್ರೀ ಎಲ್. ಸಿದ್ದಪ್ಪನವರು.—ಈಗಿನ ಸರ್ಕಾರವೂ ಅದೇ ರೀತಿ ಹೇಳುತ್ತಿದೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಆದರೂ ಈಗ ವಾಸ್ತವವಾಗಿ ಹಳ್ಳಿಗಳಲ್ಲಿ ಸರ್ಕಾರಿ ಕೆಲಸಗಳನ್ನು ಮಾಡುತ್ತಿರುವವರು ಎಂದರೆ ಪಟೇಲ್ ಶ್ಯಾನುಭೋಗರು. ಅವರೇ ತಳಹದಿ. ಅವರ ಮೇಲೆ ಶೇಕದಾರಿಂದ ಹಿಡಿದು ಮಂತ್ರಿಗಳವರೆಗೆ ಎಲ್ಲರೂ ಅಧಿಕಾರ ಚಲಾಯಿಸುತ್ತಿದ್ದಾರೆ. ಸರ್ಕಾರಿ ಕಾನೂನು ಕಟ್ಟಳೆಗಳಲ್ಲಿ ಏನೊಂದು ಲೋಪ ಬಂದರೂ ಕೂಡ ಅವರು ಶಿಕ್ಷೆಗೊಳಗಾಗುತ್ತಾರೆ. ಹೀಗಿರುವಾಗ ಪ್ರಭಾವಶಾಲಿಗಳಾದ ಪಟೇಲ ಶ್ಯಾನುಭೋಗರುಗಳು ಶಾಸನ ಸಭೆಗಳಲ್ಲದ್ದು ಕೆಲಸಮಾಡಬಹುದೆಂದರೆ, ಅವರಲ್ಲಿ ಕೆಲವರಾದರೂ ಕೂಡ ಸ್ವಾರ್ಥತೆಯಿಂದ ನಡೆದುಕೊಂಡರೆ ಆಗ್ಗೆ ಸ್ಥಳೀಯ ಅಧಿಕಾರಿಗಳು ಅವರ ಮೇಲೆ ಅಧಿಕಾರ ಚಲಾಯಿಸುವುದಕ್ಕೆ ಕಷ್ಟವಾಗುತ್ತದೆ. ಇವರುಗಳು ನ್ಯಾಯವಿಧಾಯಕ ಸಭಾನದಸ್ಯರಾಗಿದ್ದರೆ, ಇಲ್ಲ ಬಂದು ಏನಾದರೂ ಮಾಡಬಹುದು ಎಂಬ ಭಯದಿಂದ ಅವರೇನು ತಪ್ಪುಮಾಡಿದರೂ ಅವರ ಮೇಲೆ ಉಗ್ರವಾದ ಕಾರ್ಯಕ್ರಮಕ್ಕೆಗೊಳ್ಳುವುದಕ್ಕೆ ಸ್ಥಳೀಯ ಅಧಿಕಾರಿಗಳು ಹಿಂದು ಮುಂದು ನೋಡಬೇಕಾಗುತ್ತದೆ. ಎಷ್ಟೋ ವೇಳೆ ಸ್ಥಳೀಯ ಅಧಿಕಾರಿಗಳನ್ನು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನವಾಗಬಹುದು. ಹಿಂದೆಯೂ ಹೀಗೆ ಪ್ರಯತ್ನಪಟ್ಟಿರುವುದೂ ನಮ್ಮ ಅನುಭವದಲ್ಲಿದೆ. ಅವರಿಗೆ ಸರ್ಕಾರಿ ನಂಬಿಕೆ ಬರುತ್ತಿಲ್ಲವೆಂದು ಹೇಳಬಹುದು. ಆದರೂ ಅವರಿಗೆ ಪೋಟಿಗೆ ಬರುತ್ತಿದೆ. ಈಗ ಪದೇ ಪದೇ ಪೋಟಿಗಿಯನ್ನು ಜಾಸ್ತಿಮಾಡಬೇಕೆಂದು ಕೇಳುತ್ತಿದ್ದಾರೆ. ಆದ್ದರಿಂದ ಅವರೂ ಸರ್ಕಾರದಿಂದ ಪ್ರತ್ಯಕ್ಷವಾಗಿ ಪ್ರಯೋಜನ ಹೊಂದುತ್ತಿದ್ದಾರೆಂದು ಹೇಳಬಹುದಲ್ಲದೆ ಸರ್ಕಾರದ ಪ್ರತಿಯೊಂದು ಕೆಲಸಕ್ಕೂ ಅವರಿದ್ದು ಸರ್ಕಾರದ ಪರವಾಗಿ ಗ್ರಾಮದ ಅಧಿಕಾರಿ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅಂಥವರು ಈ ಶಾಸನ ಸಭೆಗಳ ಸದಸ್ಯರಾಗಿ, ಸರ್ಕಾರಿ ನೌಕರರ ಮೇಲೆ, ಸರ್ಕಾರದ ಮಂತ್ರಿಗಳ ಮೇಲೆ ಅಥವಾ ಜಿಲ್ಲಾಧಿಕಾರಿಗಳ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಅವಕಾಶಕೊಟ್ಟರೆ ಅದು ಆಭಾಸವಾಗಿ ಕಾಣುತ್ತದೆ. ಈ ದೃಷ್ಟಿಯಿಂದಲೂ ಸಹ ಅವರಿಗೆ ಇಂಥ ಅವಕಾಶವನ್ನು ಕೊಡದಿರುವುದು ಸೂಕ್ತ.

ಅಲ್ಲದೆ, ಈ ಪ್ರಶ್ನೆ ಈಗ ಹೊಸದಾಗಿ ಬಂದಿಲ್ಲ. ಹಿಂದಿನ ಶಾಸನ ಸಭೆಗಳಲ್ಲಿ ಎಷ್ಟೋ ಡೆಡ್ಕಿಯಾಗಿದೆ. ಆಗೇನೋ ಮಾನ್ಯ ಸದಸ್ಯರಾದ ಸಿದ್ದಪ್ಪನವರು ಹೇಳಿದ ಹಾಗೆ ಇವರನ್ನು Semi Officials ಎಂದು ಭಾವನೆ ಮಾಡಬೇಕಂದು ಸರ್ಕಾರದವರು ಹೇಳಿದ್ದರೂ ಸಹ, ಈಗ ಪ್ರಜಾಧಿಕಾರ ಬಂದಿರುವ ಸಂದರ್ಭದಲ್ಲಿ ಅವರ ಅಂತಸ್ತೇನೆಂಬುದನ್ನು ನಾವು ಸ್ವಲ್ಪನೋಡಬೇಕಾದ್ದು ಅವಶ್ಯಕ.. ಗ್ರಾಮಾಧಿಕಾರಿಗಳು ಶಾಸನ ಸಭೆಗಳಲ್ಲಿರುವುದಕ್ಕೆ ಅವಕಾಶಕೊಡದಿರುವುದು ಒಳ್ಳೆಯದು. ಇದರಿಂದೇನೋ ಅವರಲ್ಲಿರುವ ಅನೇಕ ಪ್ರಭಾವಶಾಲಿಗಳಾದ ವ್ಯಕ್ತಿಗಳಿಗೆ ಶಾಸನ ಸಭೆಗಳಿಗೆ ಬರುವುದಕ್ಕೆ ತೊಂದರೆಯಾಗಬಹುದು. ಅಂಥವರು ಇಷ್ಟಪಟ್ಟರೆ ತಮ್ಮ ಪಟೇಲ ಆಥವಾ ಶ್ಯಾನುಭೋಗಿ ಕೆಲಸಕ್ಕೆ ರಾಜಿನಾಮೆಕೊಟ್ಟು ಚುನಾವಣೆಗೆ ನಿಲ್ಲಬಹುದು; ಆದರೆ ಅವರು ಗ್ರಾಮಾಧಿಕಾರಿಗಳಾಗಿದ್ದುಕೊಂಡೂ ಸಹ ಶಾಸನ ಸಭಾ ಸದಸ್ಯರಾಗುವುದಕ್ಕೆ ಅವಕಾಶಕೊಡದಿರುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಶ್ರೀಮಾನ್ ಸಿದ್ದಪ್ಪನವರು ಈ ತಿದ್ದುಪಡಿಯನ್ನು ವಾಪಸುತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಚೆನ್ನಬೈರೇಗೌಡರು (ಬೆಂಗಳೂರು ಜಿಲ್ಲೆ).—ಶ್ರೀ ಸಿದ್ದಪ್ಪನವರು ತಂದಿರತಕ್ಕ ತಿದ್ದುಪಡಿಯನ್ನು ಪುಷ್ಟೀಕರಿಸುತ್ತಾ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶ್ರೀ ವೀರಣ್ಣಗೌಡರು ಹೇಳಿದರು, ಪಟೇಲ್ ಶ್ಯಾನುಭೋಗರುಗಳು ಸರ್ಕಾರದಿಂದ ನೇರವಾದ ರೀತಿಯಲ್ಲಿ ಕೆಲವು ಪ್ರಯೋಜನಗಳನ್ನು ಪಡೆಯುವವರಾಗಿದ್ದಾರೆ, ಸರ್ಕಾರದ ಸಹಾಯದಿಂದಲೇ ಜೀವನ ನಡೆಸುತ್ತಿದ್ದಾರೆ, ಆದ್ದರಿಂದ ಅವರಿಗೆ ಈ ಸಭೆಗೆ ಚುನಾಯಿತರಾಗಿ ಬರುವುದಕ್ಕೆ ಅವಕಾಶವಿರಬಾರದು, ಎಂದು. ಹಾಗೆ ನೋಡುತ್ತಾ ಹೋದರೆ, ದೇಶದಲ್ಲಿರುವ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರದಿಂದ ಸಹಾಯವನ್ನು ಪಡೆದೇ ಜೀವನ ನಡೆಸುತ್ತಿರುತ್ತಾರೆ. ಕೇವಲ ಒಬ್ಬ ಜಮೀನು ವ್ಯವಸಾಯ ಮಾಡುವವನೂ ಕೂಡ ಸರ್ಕಾರದಿಂದ ಏನಾದರೂ ಸಹಾಯ ಪಡೆದಿರುತ್ತಾನೆ. ಹೀಗಿರುವಲ್ಲಿ ಪಟೇಲ್ ಶ್ಯಾನುಭೋಗರು ತಾವು ಮಾಡಿದ ಕೆಲಸಕ್ಕಾಗಿ ಸರ್ಕಾರದಿಂದ ಅಲ್ಪ ಸ್ವಲ್ಪ ಹಣ ಪಡೆದ ಮಾತ್ರಕ್ಕೇ ಅವರು ಶಾಸನ ಸಭೆಗಳಿಗೆ ಬರುವುದಕ್ಕಿದ್ದ ಅವಕಾಶವನ್ನು ತಪ್ಪಿಸಬಾರದು. ಅಲ್ಲದೆ ಪಟೇಲ್ ಶ್ಯಾನುಭೋಗರುಗಳು ಹಳ್ಳಿಗಳಲ್ಲಿ ಇದ್ದುಕೊಂಡು ಹಳ್ಳಿಗಾಡುಗಳಲ್ಲಿ ಬಹಳ ಮುಖ್ಯರಾದವರು. ಅಂಥವರ

ಇಂಥ ಶಾಸನ ಸಭೆಗಳಲ್ಲದ್ದು ಆ ಮೂಲಕ ಸೇವೆ ಸಲ್ಲಿಸಿ ಕೊಳ್ಳುವುದು ದೇಶಕ್ಕೆ ಬಹಳ ಪ್ರಯೋಜನವನ್ನುಂಟು ಮಾಡುವುದಾಗಿದೆ. ಈಗಲಾದರೋ ಇಂಥಾ ಶಾಸನ ಸಭೆಗಳಲ್ಲೆಲ್ಲಾ ಬಹುವಾಗಿ ಲಾಯರುಗಳೇ ಬರುತ್ತಿದ್ದು ಅವರು ಸಾಮಾನ್ಯವಾಗಿ ಪಟ್ಟಣವಾಸದವರೇ ಆಗಿ, ಹಳ್ಳಿಗಳಲ್ಲೇ ಇದ್ದುಕೊಂಡು ಹಳ್ಳಿಗರ ಸ್ಥಿತಿಗತಿಗಳನ್ನು ಈ ಸಭೆಯ ಗಮನಕ್ಕೆ ತಂದು ಹಳ್ಳಿಗಳನ್ನು ಉತ್ತಮ ಪಡಿಸುವುದಕ್ಕಿದ್ದು ಅವಕಾಶವನ್ನು ತಪ್ಪಿಸಿದ ಹಾಗಾಗುತ್ತದೆ. ಆದ್ದರಿಂದ ಶಾಸನ ಸಭೆಗಳಿಗೆ ಬರುವುದಕ್ಕೆ ಸಾಮಾನ್ಯವಾಗಿ ಯಾರಿಗೂ ಅಡಚಣೆಯಿರಬಾರದು. ಕೇಂದ್ರ ಸರ್ಕಾರದವರೂ ಕೂಡ ಈಗ ಕೇವಲ ಸರ್ಕಾರಿ ಕಂಟ್ರಾಕ್ಟರುಗಳಿಗೆ ವಿನಾ ಮಿಕ್ಕವರೆಲ್ಲರೂ, ಲೈಸೆನ್ಸ್ ದಾರರು ಗಳು ಸಹಾ ಚುನಾಯಿತರಾಗಿ ಈ ಸಭೆಗಳಿಗೆ ಬರಬಹುದೆಂದು ತೀರ್ಮಾನ ಮಾಡಿದ್ದಾರೆ. ಆದ್ದರಿಂದ ಈ ರೀತಿಯಲ್ಲಿ ನಾವು ಯಾರಿಗೂ ಅಡಚಣೆಗಳನ್ನು ತಂದುಹಾಕಕೂಡದು. ಸಭಾನದಸ್ಯರು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಚ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ಸ್ವಾಮಿ, ಶ್ರೀ ಸಿದ್ದಪ್ಪನವರು ತಂದಿರತಕ್ಕ ತಿದ್ದುಪಡಿಯನ್ನು ವಿರೋಧಿಸುತ್ತಾ ಕೆಲವು ವಿಚಾರ ಗಳನ್ನು ನಾನು ಹೇಳಬೇಕೆಂದಿದ್ದೇನೆ. ಇಲ್ಲಿಯ ವರೆಗೂ ಶಾಸನ ಸಭೆಗಳಲ್ಲಿ ಪಟೇಲ್ ಶ್ಯಾನುಭೋಗರು ಗಳಿದ್ದರು. ಈಗ ಅವರು ನಿಲ್ಲುವುದಕ್ಕೆ ಅವಕಾಶವಿಲ್ಲ ವೆಂದು ಹೇಳಿದ್ದಾರೆ. ಕಾರಣ, ಅವರು ಸರ್ಕಾರ ದಿಂದ ಒಂದು ಸಂಭಾವನೆಯನ್ನು ಪಡೆದುಕೊಳ್ಳು ತ್ತಿದ್ದಾರೆ. ಅಂಥವರು ಸರ್ಕಾರದ ಮೇಲಾಗಲೀ, ಅಧಿಕಾರವರ್ಗದವರ ಮೇರಾಗಲೀ ಟೀಕೆ ಟಿಪ್ಪಣಿ ಗಳನ್ನು ಮಾಡುವುದಕ್ಕೆ ಹೊರಟರೆ ಸಾಧುವಾದ್ದಲ್ಲ ವೆಂದು ನನ್ನ ಮಾನ್ಯ ಮಿತ್ರರುಗಳಾಗರೇ ಹೇಳಿದ್ದಾರೆ. ಆದರೆ, ಶ್ರೀ ಚೆನ್ನಬೈರೆಗೌಡರು ಅವರ ಪರವಾಗಿ ಹೇಳುತ್ತಾ, ಅವರು ಹಿಂದೆಲ್ಲಾ ಇಂಥಾ ಸಭೆಗಳಲ್ಲದ್ದು ಕೊಂಡು ಬಹಳ ಸೇವೆ ಸಲ್ಲಿಸುತ್ತಿದ್ದರು, ಈಗಲೂ ಹೆಚ್ಚಿನ ಸೇವೆ ಸಲ್ಲಿಸುವವರಾಗಿದ್ದಾರೆ, ಅಂಥವರಿಗೆ ಅವಕಾಶ ತಪ್ಪಿಸುವುದು ಸರಿಯಲ್ಲವೆಂದು ವಾದಿಸಿ ದರು. ಆದಕ್ಕೆ ಉತ್ತರವಾಗಿ ನಾನು ಹೇಳುವುದಿಷ್ಟೆ. ಹಾಗೆ ಅವರು ಜನರಿಗೆ ಸೇವೆ ಮಾಡಬೇಕೆಂಬ ನಿಜವಾದ ಮನೋಭಿಲಾಷೆಯಿದ್ದರೆ, ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಸ್ವತಂತ್ರವಾಗಿ ಚುನಾವಣೆಗೆ ನಿಂತು ಈ ಸಭೆಗಳಿಗೆ ಬರುವುದಕ್ಕೇನೂ ಅಡ್ಡಿಯಿಲ್ಲ. ಅವರೂ ಚುನಾಯಿತರಾಗಿ ಬರಬಹುದು. ಈಗಾಗಲೇ ತಮಗೆ ತಿಳಿದಿರುವ ಹಾಗೆ ಈ ಪಟೇಲ್ ಶ್ಯಾನುಭೋಗರುಗಳು ತಮ್ಮದೇ ಒಂದು ಸಂಘವನ್ನು ಮಾಡಿಕೊಂಡು ತಮಗೆ ಯಾವ ರೀತಿ ಹೆಚ್ಚಿನ ಸೌಲಭ್ಯಗಳನ್ನು ಸರ್ಕಾರದಿಂದ ಪಡೆದುಕೊಳ್ಳಬೇಕು, ಯಾವ ರೀತಿ ತಮ್ಮ ಅಧಿಕಾರ ಗಳನ್ನು ಹೆಚ್ಚುಮಾಡಿಕೊಳ್ಳಬೇಕೆಂಬುದನ್ನು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆ. ಇಂಥಾ ಸಂದರ್ಭದಲ್ಲಿ ಅವರುಗಳಿಗೆ ಶಾಸನ ಸಭೆಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿಲ್ಲುವುದಕ್ಕೆ ಅವಕಾಶಕೊಟ್ಟರೆ, ಅದರಿಂದ ದೇಶಕ್ಕೆ ಹಾನಿಯುಂಟಾಗುತ್ತದೆ. ಸೇವಾ ಮನೋ ಭಾವವೇ ಎಲ್ಲರಲ್ಲಿಯೂ ಇದೆಯೆಂದು ಹೇಳುವುದಕ್ಕಾಗು ವುದಿಲ್ಲ. ಆದ್ದರಿಂದ ಇಂಥಾದ್ದಕ್ಕೆ ಅವಕಾಶ ಕೊಡು ವುದು ಸರಿಯಲ್ಲ. ಒಂದುವೇಳೆ ಅವರು ಶಾಸನ ಸಭೆ ಗಳಿಗೆ ನಿಲ್ಲಬೇಕು, ಜನರಿಗೆ ತಮ್ಮ ಸೇವೆ ಸಲ್ಲಿಸಬೇಕೆಂಬ ಆಕಾಂಕ್ಷೆಯಿದ್ದರೆ, ಅವರು ತಮ್ಮ ಬರಾವ್ದರ್ನ್ನು ಬೇರೆಯವರಿಗೆ ಕೊಟ್ಟು, ಸ್ವತಂತ್ರವಾಗಿ ಚುನಾಯಿತ ರಾಗಿ ಬರುವುದು ಒಳ್ಳೆಯದು. ಪಟೇಲ್ ಶ್ಯಾನು ಭೋಗರಾಗಿದ್ದುಕೊಂಡೇ ಶಾಸನ ಸಭೆಗಳಿಗೆ ಬರು ವುದು ಸರಿಯಲ್ಲವೆಂದು ಹೇಳಿ ನಾನು ಈ ತಿದ್ದುಪಡಿ ಯನ್ನು ವಿರೋಧಿಸುತ್ತೇನೆ.

ಶ್ರೀ ಎಂ. ಎಸ್. ಮಹಂತದೇವರು (ಮೈಸೂರು ಜಿಲ್ಲೆ).—ಸ್ವಾಮಿ, ಶ್ರೀ ಎಲ್. ಸಿದ್ದಪ್ಪನವರು ತಂದಿರತಕ್ಕ ತಿದ್ದುಪಡಿಯನ್ನು ಅನುಮೋದಿಸುತ್ತ ನಾನು ಒಂದೆರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಿಂದೆ ಶಾಸನ ಸಭೆ ಮತ್ತು ಅಸೆಂಬ್ಲಿಗೆ ಸುಮಾರು 20—25 ವರ್ಷಗಳಿಂದ ಈ ತೆರನಾದ ಆಡ್ಡಿ ಆತಂಕಗಳಾಗಲಿ ಅಥವಾ ನಿರ್ಬಂಧಗಳಾಗಲೀ ಯಾರಿಗೂ ಏನೂ ಇರಲಿಲ್ಲ. ಹಿಂದೆಲ್ಲಾ ಪಟೇಲ್ ಶ್ಯಾನುಭೋಗರುಗಳು ಅಸೆಂಬ್ಲಿ ಮತ್ತು ಶಾಸನ ಸಭೆಗಳಿಗೆ ಸದಸ್ಯರಾಗಿ ಬರುತ್ತಿದ್ದರು. ಹಾಗೆ ಅವರು ಬರುತ್ತಿದ್ದಾಗ ಸರ್ಕಾರದಲ್ಲಿದ್ದ ಬಿಗಿ ಈ ದಿವಸ ಇರುವುದಿಲ್ಲ. ಹಿಂದೆ ಅವರು ಹಾಗೆ ಸದಸ್ಯರಾಗಿ ಬರುತ್ತಿದ್ದಾಗ ಸರ್ಕಾರ ಬಿಕ್ಕಟ್ಟಾಗೇ ನಡೆಯುತ್ತಿತ್ತು. ಆದ್ದರಿಂದ ಶ್ರೀ ಎಚ್. ಕೆ. ವೀರಣ್ಣಗೌಡರು ಸೂಚಿಸಿ ದಂಥ ಶಂಕೆಗೆ ಯಾವ ಅವಕಾಶವೂ ಇರುವುದಿಲ್ಲ. ಇಂದು ಯಾರೂ ಅಧಿಕಾರವರ್ಗದವರಿಗೆ ಹೆದರಿಕೊಂಡು ಕೆಲಸಮಾಡಬೇಕೆಂದು ಹೇಳುತ್ತಿಲ್ಲ. ಅಂಥಾ ಹೆದರ ಬೇಕಾದ ಸಂದರ್ಭಗಳೂ ಇಲ್ಲ. ಆದಕಾರಣ ಪಟೇಲ್ ಮತ್ತು ಶ್ಯಾನುಭೋಗರುಗಳೂ ಕೂಡ ಈ ಸಭೆಗಳಲ್ಲಿ ಸದಸ್ಯರಾಗಿ ಕೆಲಸ ಮಾಡಲು ಅವಕಾಶ ಕಲ್ಪಿಸತಕ್ಕದ್ದು ಅತ್ಯಾವಶ್ಯಕ. ಅವರು ಮುಂದೆ ಚುನಾವಣೆಗಳಲ್ಲಿ ನಿಂತು ಆರಿಸಿಬರಲು ಒಂದು ಅವಕಾಶವಿದ್ದೇ ತೀರ ಬೇಕು. ಅವರಿಗಾದರೋ ತಾವು ಕೊಡುತ್ತಿರುವ ಸಂಭಾವನೆಯು ತೀರಾ ಸ್ವಲ್ಪ ಮತ್ತು ಅದನ್ನು ಸಂಬಳವೆಂದೇನೂ ತಾವು ಅವರಿಗೆ ಕೊಡುತ್ತಿಲ್ಲ. ತಾವು ಅವರಿಗೀಗ ಕೊಡುತ್ತಿರುವುದು ಪೋಟಿಗೆ ಎಂದು. ಈ ಕಾರಣದಿಂದ ಅವರು ಸರ್ಕಾರಿ ನೌಕರರಲ್ಲವೆಂದೇ ಭಾವಿಸಲಾಗಿರುತ್ತೆ. ಆದ್ದರಿಂದ ಅವರಿಗೂ ಸಹ ಒಂದು ಅವಕಾಶ ಕಲ್ಪಿಸತಕ್ಕದ್ದು ಸೂಕ್ತ. ಈಗ ನಡೆಯುತ್ತಿರುವ ಆಡಳಿತದಲ್ಲಿ ಬಿಗಿ ಕಮ್ಮಿಯಾ ಗಿದೆಯೇ ವಿನಾ ಅವರು ಸದಸ್ಯರಾಗಿ ಬರುತ್ತಿದ್ದ ಕಾಲದಲ್ಲಿ ಬಿಗಿಯಾಗಿಯೇ ಕೆಲಸಕಾರ್ಯಗಳು ನಡೆಯು ತ್ತಿದ್ದವು. ಈಗಲೇ ಎಲ್ಲಾ ತೆರನಾದ ತೊಂದರೆ, ತಾಪತ್ರಯಗಳು ಬಂದಿರುವುದು. ಆದ್ದರಿಂದ ಅವರಿಗೂ ಸಹ ಇಲ್ಲಿ ಬಂದು ಅವರ ಸೇವೆ ಸಲ್ಲಿಸಲು ಒಂದು ಅವ ಕಾಶ ಕಲ್ಪಿಸತಕ್ಕ ಬಗ್ಗೆ ತಾವೆಲ್ಲರೂ ಒಪ್ಪಿಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕ ಮಗಳೂರು ನಿಮ್ನ ಪಂಗಡ).—ಈಗ ಶ್ರೀ ಸಿದ್ದಪ್ಪ ನವರು ತಂದಿರತಕ್ಕ ತಿದ್ದುಪಡಿಯನ್ನು ನಾನು ವಿರೋಧಿ ಸುತ್ತೇನೆ. ಶ್ರೀ ಚನ್ನಬೈರೇಗೌಡರೇನೋ ಇದು ಪ್ರಜಾಪ್ರಭುತ್ವದ ಕಾಲ, ಆದ್ದರಿಂದ ಎಲ್ಲರಿಗೂ ಒಂದೇ ಸಮಾನವಾದ ಹಕ್ಕುಬಾಧ್ಯತೆಗಳಿರಬೇಕೆಂದು ಒಂದು ತತ್ವಾಧಾರದಮೇಲೆ ವಾದ ಮಾಡಿದ್ದಾರೆ. ಆದರೆ ಇಂದಿನ ಪ್ರಜಾಪ್ರಭುತ್ವದಲ್ಲಿ ಅವರು ಸರಿಯಾಗಿ ಮಾಡ ತಕ್ಕ ಕೆಲಸಕಾರ್ಯಗಳನ್ನು ಮಾಡುತ್ತಿಲ್ಲ. ಅವರು ಅವರಿಗಿರತಕ್ಕ ಅಧಿಕಾರ ವ್ಯಾಪ್ತಿಯಲ್ಲಿ ನ್ಯಾಯವಾಗಿ ಇಂದು ನಡೆಯುತ್ತಿದ್ದಾರೇನು ? ಅವರ ಇತರರ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳತಕ್ಕ ಬಗ್ಗೆ ಅವಕಾಶ ಕೊಟ್ಟಿದ್ದಾರೆಯೆ ಎಂಬುದನ್ನು ನಾವೀಗ ನೋಡ ಬೇಕಾಗಿದೆ.

ಅಧ್ಯಕ್ಷರು.—ಆ ವಿಚಾರಕ್ಕೂ, ಇದಕ್ಕೂ ಏನು ಸಂಬಂಧ ?

Sri L. H. THIMMA BOI.—I will explain it now.

ಅಧ್ಯಕ್ಷರು.—ಈಗ ನಭೆಯ ಮುಂದೆ ಬಂದಿರತಕ್ಕದ್ದು ಅವರಿಗೆ ಈ ಒಂದು ಅರ್ಹತೆ ಇರಬೇಕೆ, ಬೇಡವೆ ಎನ್ನುವುದು. ಅದನ್ನು ಮಾತ್ರ ಹೇಳಿ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಈ ಪಟೇಲ್ ಶ್ಯಾನುಭೋಗರುಗಳ ಲೆಜಿಸ್ಲೇಟರುಗಳಾದರೆ ಅವರ ಪ್ರಭಾವ ಜಿಲ್ಲಾಮಳೆಯಲ್ಲೆಲ್ಲಾ ಜಾಸ್ತಿಯಾಗಿ ಕಾನೂನಿನಿಗೆ ಅವರು ವಿರೋಧವಾಗಿ ನಡೆಯಲು ಅವಕಾಶವಾಗುತ್ತದೆ. ಹಾಗಾಗಿ ಅವರು ಜಿಲ್ಲಾಧಿಕಾರಿಗಳನ್ನೂ ಮತ್ತು ತಾಲ್ಲೂಕಿನಲ್ಲರತಕ್ಕ ಅಧಿಕಾರಿಗಳನ್ನೂ ಗಮನಕ್ಕೇ ತಾರದೆ ಕೆಲಸಮಾಡ ಬಹುದು. ಹಾಗೆ ಅವರಿಗೇನಾದರೂ ಇಂಥಾ ಒಂದು ಅವಕಾಶವನ್ನುಂಟುಮಾಡಿಕೊಟ್ಟರೆ ಅದರಿಂದ ರೈತರ ಹಕ್ಕುಬಾಧ್ಯತೆಗಳಿಗೆ ತುಂಬಾ ತೊಂದರೆಯಾಗಬಹುದಾದ ಕಾರಣ ಅವರಿಗೆ ಈ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ನಾನು ಈ ತಿದ್ದುಪಡಿಯನ್ನು ಪುಷ್ಟೀಕರಿಸುತ್ತೇನೆ. ಪಟೇಲ್ ಶ್ಯಾನುಭೋಗರುಗಳು ಬಹಳ ಜವಾಬ್ದಾರಿಯುತರಾದ ಜನರು. ಅವರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ, ಅವರು ಇಂಥಾ ನಭೆಗಳಲ್ಲಿ ಸದಸ್ಯರಾಗಿರಕೂಡದೆಂದು ಹೇಳುವುದು ಸರಿಯಲ್ಲ. ಅವರು ಅಲ್ಲಿ ಸಂಭಾವನೆ ಮೇಲೆ ಕೆಲಸ ಮಾಡುತ್ತಿದ್ದರೂ ಬಹಳ ಚೆನ್ನಾಗಿ ಸೇವೆ ಮಾಡುತ್ತಿದ್ದಾರೆ. ಹಿಂದಿನಿಂದಲೂ ಅವರು ತಮ್ಮ ಸೇವೆಯನ್ನು ದೇಶಕ್ಕೆ ಯಥಾಪತ್ತಾಗಿ ಸಲ್ಲಿಸಿಕೊಂಡು ಬಂದಿದ್ದಾರೆ. ಇನ್ನೂ ಸಲ್ಲಿಸಲಿಕ್ಕೆ ಅರ್ಹರಾಗಿದ್ದಾರೆ. ಹಿಂದೆ ಇಂಥಾ ನಭೆಗಳಿಗೆ ಒಂದು ಸೇವೆ ಸಲ್ಲಿಸಲು ಅವರಿಗೆ ಯಾವ ನಿರ್ಬಂಧಗಳೂ ಇರಲಿಲ್ಲ. ಹಿಂದೆ ಆ ರೀತಿ ಮಾಡಿದ್ದುದು ನ್ಯಾಯವಾಗಿತ್ತು. ಹಾಗೆ ಈ ದಿವಸ ಅವರೆಲ್ಲರನ್ನೂ ಸಂಭಾವನೆ ಪಡೆದು ಕೆಲಸಮಾಡುತ್ತಿದ್ದಾರೆಂಬ ಕಾರಣದಿಂದ ಬಿಟ್ಟುಬಿಡುವುದಾದರೆ ಇಲ್ಲಿ ಈ ದಿವಸ ಪ್ರತಿಯೊಬ್ಬ ಅಸೆಂಬ್ಲಿ ಸದಸ್ಯರೂ 100 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ, ಆದ್ದರಿಂದ ಇವರನ್ನು ಸಹ ಅದೇ ರೀತಿ ಬಿಟ್ಟುಬಿಡಬೇಕಾಗುತ್ತದೆ. ನಮ್ಮ ರಕ್ಷಣೆ ಮಾಡಿಕೊಂಡಂತೆ ಇತರರ ರಕ್ಷಣೆಗೂ ಅವಕಾಶ ನೀಡಬೇಕು. ಈ ವಿಚಾರದಲ್ಲಿ ಯಾವ ಒಂದು ಪಕ್ಷಪಾತ ಭಾವನೆಯೂ ಇಲ್ಲದಂತೆ ತೀರ್ಮಾನಮಾಡತಕ್ಕದ್ದು ಈ ಸಭೆಯ ಗೌರವಕ್ಕೆ ಸೇರಿರತಕ್ಕ ವಿಚಾರ. ಅದಕ್ಕೆ ಧಕ್ಕೆ ಬಾರದಂತೆ ನೋಡಿ ನಡೆಯಬೇಕಾದ್ದು ಮುಖ್ಯ. ಈಗಿರತಕ್ಕ ಸದಸ್ಯರು 100 ರೂಪಾಯಿ ಸಂಭಾವನೆ ಪಡೆದುಕೊಂಡರೆ, ಪಟೇಲರು 10–20 ರೂಪಾಯಿ ಸಂಭಾವನೆ ಪಡೆಯತಕ್ಕವರಾಗಿದ್ದಾರೆ. ದೇಶದಲ್ಲಿರತಕ್ಕ ಹೆಚ್ಚು ಜನಗಳ ಸಂಪರ್ಕವಿರುವಂಥ ಗುಂಪಿನ ಜನರ ಅಭಿಪ್ರಾಯಗಳನ್ನು ಸೂಚಿಸತಕ್ಕ ಬಗ್ಗೆ ಅವರಿಗೊಂದು ಅವಕಾಶ ಕೊಡತಕ್ಕದ್ದು ಬಹು ಮುಖ್ಯವಾದ ಅಂಶ. ಇದು ನ್ಯಾಯವಾಗಿಯೂ ಇದೆ. ಹೀಗೆ ಮಾಡತಕ್ಕದ್ದೂ ಸಮಂಜಸವಾಗಿದೆ. ಆದ್ದರಿಂದ ಈ ತಿದ್ದುಪಡಿಯನ್ನು ಸರ್ವರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಎಲ್. ಸಿದ್ದಪ್ಪನವರು.—ಈಗ ಮಾನ್ಯ ಸದಸ್ಯರು ಸೂಚಿಸಿರತಕ್ಕ ಬಗ್ಗೆ ಒಂದು ಅಂಶವನ್ನು ನಾನು ಸ್ಪಷ್ಟವಾಗಿ ತಿಳಿಸುತ್ತ ಅದಕ್ಕೆ ಉತ್ತರ ಕೊಡಬೇಕಾಗಿದೆ.

ಅಧ್ಯಕ್ಷರು.—ಹಾಗೆ right of reply ಗೆ ಅವಕಾಶ ವಿಲ್ಲವೆಂದು ಕಾಣುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಹೀಗೊಂದು ಅವಕಾಶ ಕಲ್ಪಿಸಿದಲ್ಲಿ ಪಟೇಲ್ ಶ್ಯಾನುಭೋಗರು ಜನರಿಗೆ ಕೆಡಕನ್ನು ಮಾಡುತ್ತಾರೆಂದು ಕೆಲವರು ತಿಳಿಸಿದ್ದಾರೆ. ಹಾಗೆ ಕೆಡಕನ್ನು ಮಾಡತಕ್ಕ ಸ್ವಭಾವದ ಜನರು ಎಲ್ಲಾ ಕಡೆಯಲ್ಲೂ ಇದ್ದಾರೆ. ಹೀಗೆ ನಾವು ಒಂದು ಅವಕಾಶ ಕಲ್ಪಿಸಿದ ಮಾತ್ರಕ್ಕೇ ಅವರು ಏಕ್‌ದಂ ಇಲ್ಲಿಗೆ ಬಂದು ಕುಳಿತುಕೊಳ್ಳುವುದಿಲ್ಲ. ಹಾಗೆ ಒಂದು ಅವಕಾಶ ಮಾಡಿದ್ದರೆ ಅವರಲ್ಲಿ ಯಾರು ಗಣ್ಯರಾಗಿದ್ದಾರೋ, ಮತ್ತು ಯಾರು, ಜನಾನುರಾಗಿಗಳಾಗಿದ್ದಾರೋ ಅಂಥವರೇ ಜನರಿಂದ ಚುನಾಯಿಸಲ್ಪಟ್ಟ ನಂತರ ಇಲ್ಲಿಗೆ ಬರಬೇಕಾಗಿರುತ್ತೆ. ಹಾಗೇನಾದರೂ ಅವರು ಜನರ ಹಿತವನ್ನು ಕಾಪಾಡುವುದಿಲ್ಲವೆಂಬ ಶಂಕೆಯಿದ್ದ ಭಾಗದಲ್ಲಿ ಅವರು ಚುನಾವಣೆಯಲ್ಲಿ ಗೆದ್ದು ಬರಲು ಸಾಧ್ಯವೇ ಇಲ್ಲ. ಅಥವಾ ಅವರಿಗೆ ತಕ್ಕ ದಕ್ಷತೆ ಇಲ್ಲದ ಪಕ್ಷಕ್ಕೆ ಅಂಥವರನ್ನು ಯಾರೂ ಚುನಾವಣೆ ಮಾಡಿ ಕಳುಹಿಸುವುದೂ ಇಲ್ಲ. ಅವರು ಸರ್ಕಾರಿ ನೌಕರರಲ್ಲವೆಂಬ ದೃಷ್ಟಿಯಿಂದಲೇ ಈ ತಿದ್ದುಪಡಿಯನ್ನು ತರಲಾಗಿರುತ್ತೆ. ಹೀಗೊಂದು ಅವಕಾಶ ತಪ್ಪಿಸುವುದರಿಂದ ಸಂಸ್ಥಾನದಲ್ಲರತಕ್ಕ ಸುಮಾರು 25 ಸಾವಿರ ಪಟೇಲ್ ಶ್ಯಾನುಭೋಗರನ್ನೆಲ್ಲಾ ಹೊರದೂಡಿದಂತಾಗುತ್ತೆಂಬ ಅಂಶ ತಾವು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

The Hon'ble Sri K. T. BHASHYAM.—Sir, Government cannot accept this amendment. We have got every respect for Patels and Shanbhogs just as my Hon'ble friend has. Therefore, he cannot go out and say "I moved the House for including Patels and Shanbhogs but the Minister did not allow me." He cannot go out and say it in the country. I want to make it very clear that we respect Patels and Shanbhogs, but by including Patels and Shanbhogs, it will lead to very undesirable repercussions. What are Patels and Shanbhogs? Are they not carrying out the duties of the Government in the villages? You may not call them Government servants as you call the Deputy Commissioner or the Amildar or the Clerks. But, are they not carrying out Government Orders? Is not the Patel the head of the Police in the village? Supposing a Patel is elected and he comes and sits here. Supposing a Deputy Commissioner complains against him about his work in the village. He will come here and put up all sorts of interpellations and resolutions and drag the name of the Deputy Commissioner. How can you expect the Deputy Commissioner to keep law and order? How can you expect this Patel to be obedient to his superiors in the District?

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಮದ್ರಾಸಿನ ಪ್ರಾವಿಷ್‌ನಲ್ಲರತಕ್ಕವರಿಗೆ ಸಂಬಳ ಕೊಟ್ಟು

ಇಟ್ಟಿದ್ದಾರಲ್ಲ. ಆದರಂತೆ ನೀವೂ ಏಕೆ ಅವರಿಗೆ ಸಂಬಳ ಕೊಡಬಾರದು ?

The Hon'ble Sri K. T. BHASHYAM.—That is a different question. I will come to that. The hereditary right is there—a very valuable right. He always knows the value of money like you and me. He does not want to lose the hereditary right. What he loses by way of money, he gains by having the hereditary right. Why do you not see the balancing of these circumstances in the case ? Patels and Shanbhogues are expected to serve the people in the villages and under the orders of the Amildar, the Sub-division Officer or the Deputy Commissioner. If you make the Patel as member of the Legislature you can take it for certain that he will boss over his own bosses. The tail will wag the dog and the administration will come to a standstill. And another thing is, Patels and Shanubhogues have got such heavy work in the villages that you cannot expect them to spare time to study political situations and bring up interpellations, resolutions and what not in the Legislative Assembly. The Members of the Legislature spend so much time and energy to get ready for discussion in the Assembly. You cannot expect the Patel and Shanubhogue to do it. ಹಿಂದಿನ ಕಾಲದ ಸರ್ಕಾರ ಬೇರೆ ತರಹ ಇತ್ತು. ಮಹಾಸ್ವಾಮಿ, ತಮ್ಮ ಕಾಲದಲ್ಲಿ ಎಲ್ಲಾ ಆಗಬೇಕು, ತಾವೇ ಇಂದ್ರ ಚಂದ್ರ ದೇವೇಂದ್ರರು ಎಂದು ಹೇಳುತ್ತಿದ್ದ ಕಾಲ ಹೋಯಿತು. Those times are gone. We are now governing the country according to democratic principles and you cannot in the name of democracy put in Patels and Shanubhogues in the Assembly. How is it right? Can you in the name of democracy bring in the Deputy Commissioner, the Sub-Division Officer and everybody into the legislature ? You must understand that there are certain limitations. There are certain offices which while they have got certain privileges, have also got certain limitations, Patels and Shanbhogs are Government servants in a sense. And it is highly undesirable to allow Patels and Shanbhogus to stand as candidates for the Legislative Assembly. You cannot judge the fitness of a citizen to be a candidate by reason of the remuneration he gets. Some of us are poor, but still since we are independent citizens we have a right to stand as candidates. There may be persons with lakhs of rupees, but still they may be disqualified. So money is not the criterion. Even according to you, they do not want seats in the legislature, What they want is money.

Another argument was advanced namely that Patels and Shanbhogus are as able people as others. Nobody contests it. We do not say they are not able. They are very able people, no doubt. But it is not a question of ability. It is a question of a limitation being placed on those officers in the discharge of their duties. Sir, it is not wise, it is not desirable, on the other hand it is dangerous, to allow people who perform Government duties under Government officers to come and sit as members of the Legislative Assembly We cannot therefore accept this amendment at all.

Sri L. SIDDAPPA.—I press this amendment, Sir.

Mr. SPEAKER.—The question is :

"That in the Schedule a new item shall be added at the end as follows :

"3. Village Officers, *i.e.*, Patels and Shanbhogs"."

The motion was negatived.

Mr. SPEAKER.—The question is :

"That the Schedule stand part of the Bill."

The motion was adopted.

The Schedule was added to the Bill.

Mr. SPEAKER.—Clause 1. The question is.—

"That clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri K. T. BHASHYAM.—Sir, I beg to move :

"That the Mysore Legislative Assembly (Prevention of Disqualification) Bill, 1951, as reported by the Select Committee, be passed."

Mr. SPEAKER.—The question is :

"That the Mysore Legislatvie Assembly (Prevention of Disqualification) Bill, 1951, as reported by the Select Committee, be passed."

The motion was adopted.

The Bangalore City Municipal Corporation (Amendment) Bill 1951.

Motion to consider.

Mr. SPEAKER.—We may now resume discussion on the Bangalore City Municipal Corporation (Amendment) Bill, 1951. We were discussing the Bill and because some Hon'ble Members requested time to study the Bill further, we stopped it at that stage. The consideration motion is now before the House. Anybody who wants to speak on it can do so.

The Hon'ble Sri K. T. BHASHYAM (Minister for Law and Labour).—Sir, in respect of this Bill, I wish to bring to the notice of this Hon'ble House that in making these changes which we have now made, we are providing for larger powers being exercised by the Corporation. And the various sections which confer these powers are contained in this Bill. I wish to make one statement; namely, that in respect of this Bill many of the corporators of Bangalore have given their suggestions to us and we wish to express on behalf of the Government our gratitude to them for the earnestness with which they have gone through this Bill and pointed out some of the changes which might further be made in order to make this Bill even more effective and useful. We have adopted many of their suggestions. Some of the suggestions, of course we could not adopt. For example: they say that the Corporation should have the final word in all matters and when we say 'you cannot do this without consulting the Government', naturally they say 'you do not put that limitation on us, we would like to have full autonomy!' While we have given the corporation autonomy as far as we can in consonance with the spirit of the Constitution, we feel that Government have to control and supervise. It is only this kind of limitation that we have provided for —we have provided for control and supervision by the Government. And though in certain matters like this which are very few, Government had to retain power to control, I am glad to testify, Sir, that this Bill confers very wide powers over the Corporation and we hope that by reason of the passing of this Bill, the Corporation will be able to render even more efficient service than the Municipality was able to do. I wish to express on the floor of this House our thanks to the Corporators who gave these suggestions and to convey to them our appreciation of their efforts and to say that while we have accepted many of the amendmends suggested by them, if we did not accept a few other amendments which we could not accept, it is not because we were unwilling to accept them, but because we felt that it was not possible under the then circumstances under which we were situated, to accept those amendments.

With these words, Sir I commend this Bill for the acceptance of the House.

Mr. SPEAKER.—The question is :

"That the City of Bangalore Municipal Corporation (Amendment) Bill, 1951, as reported by the Select Committee, be taken into consideration."

The motion was adopted.

Mr. SPEAKER.—The clauses of the Bill will be submitted to the Assembly. Clauses 2 to 20, both inclusive. The question is

"That Clauses 2 to 20, both inclusive, stand part of the Bill."

The motion was adopted.

Clauses 2 to 20, both inclusive, were added to the Bill.

Mr. SPEAKER.—Clause 21. The Hon'ble Minister for Local Self-Government has an amendment.